(vi) ಬಳ್ಳಾರಿ ತಾಲ್ಲೂಕಿನ ಯಲ್ಲಾಪುರದಲ್ಲಿ ಸಿಡೆಜೆ ಜಾಸ್ತಿಯಾಗಿ ತೊಂದರೆಯುಂಟಾದ ಬಗ್ಗೆ

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಜಿಲ್ಲೆಯ ಯಲ್ಲಾಪುರ ಎಂಬಲ್ಲಿ ಸೀಪೆಜ್ ಜಾಸ್ತಿಯಾಗಿ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ನಾನು ಸದನದಲ್ಲಿ ಪ್ರಶ್ನೆ ಕೇಳಿದಾಗ ಕಳೆದ ಸಲ ನಾವು ಮಾಡುತ್ತೇವೆಂದು ಹೇಳಿದರು. ಇಲ್ಲಿಯವರೆಗೂ ಏನು ಮಾಡಲಿಲ್ಲ. ನೀರು ಹೊರಗೆ ಹರಿಯುವುದರಿಂದ ಹುಳ್ಳಗಳು ಜಾಸ್ತಿಯಾಗಿ ಅನಾರೋಗ್ಯಕ್ಕೆ ಕಾರಣವಾಗಿದೆ. ಬಾವಿಗಳೆಲ್ಲಾ ತುಂಬಿ ಹರಿಯುತ್ತಿವೆ. ರಸ್ತೆಗಳಲ್ಲಿ ಮನೆಗಳಲ್ಲಿ ನೀರು ಇದೆ. ಇದುವರೆಗೆ ಸರ್ಕಾರ ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲ. ಇದುವರೆಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ? ಅದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್—ನಾನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ತಮ್ಮ ಪಕ್ಕದಲ್ಲೆ ಮಂತ್ರಿಗಳಿದ್ದಾರೆ, ಅವರು ಉತ್ತರ ಕೊಡಲಿ.

ಅಧ್ಯಕ್ಷರು.—ತಾವು ನೀರಿನ ಬಗ್ಗೆ ಕೇಳಿದ್ದೀರಿ.

ಶ್ರೀ ಎಂ. ರಾಮಪ್ಪ.—ನಾನು ರಸ್ತೆ, ನೀರು, ನಿವೇಶನ ಎಲ್ಲದರ ಬಗ್ಗೆ ಕೇಳಿದ್ದೇನೆ. ಮಾನ್ಯ ಕಾನೂನು ಮಂತ್ರಿಗಳ ಬಗಲಲ್ಲೇ ಮಾನ್ಯ ಕಂದಾಯ ಮಂತ್ರಿಗಳಿದ್ದಾರೆ, ನಿವೇಶನ ಕೊಡಬೇಕಾದರೆ ರೆವೆನ್ಯೂ ಡಿಪಾರ್ಟಮೆಂಟ್ ಭೂಮಿಯನ್ನು ಆಕ್ವೈರ್ ಮಾಡಬೇಕಾಗುತ್ತದೆ, ಲೋಕೋಪಯೋಗಿ ಇಲಾಖೆಗೂ ಸಂಬಂಧಪಡುತ್ತದೆ.

ಶ್ರೀ ವಿ. ಎಲ್. ಪಾಟೀಲ್.—ಈ ವಿಷಯ ರೆವಿನ್ಯೂ ಮಂತ್ರಿಗಳಿಗೆ ಸಂಬಧಪಟ್ಟಿದ್ದಲ್ಲ, ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮನೆಗಳಲ್ಲಿ ನೀರು ಇದ್ದರೆ ವಿಲೇಜನ್ನು ಶಿಫ್ಟಿಂಗ್ ಮಾಡಬೇಕಾಗುತ್ತದೆ. ವಿಲೇಜನ್ನು ಶಿಫ್ಟ್ ಮಾಡಬೇಕಾದರೆ ಲ್ಯಾಂಡ್ ಅಕ್ವಿಜಿಶನ್ ಮಾಡಬೇಕು. ಲ್ಯಾಂಡ್ ಅಕ್ವಿಜಿಶನ್ ಅನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಮಾಡುತ್ತಾರೆ.

ಅಧ್ಯಕ್ಷರು.—ನಿರ್ದಿಷ್ಟವಾಗಿ ಹೇಳಿದರೆ ಏನಾದರೂ ಮಾಡಬಹುದು. ಏನಾದರೂ ಪ್ರಶ್ನೆ ಕೇಳುವಾಗ ನಿರ್ದಿಷ್ಟವಾಗಿ ಕೇಳಬೇಕು. ತಮ್ಮ ನೋಟೀಸ್‌ನಲ್ಲಿ ಏನೇನು ಕೇಳಿದ್ದೀರಿ ?

ಶ್ರೀ ಎಂ. ರಾಮಪ್ಪ.—ವಿಲೇಜ್ ಅನ್ನು ಶಿಫ್ಟ್ ಮಾಡಬೇಕೆಂದು ಇದೆ. ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಮತ್ತು ಲೋಕೋಪಯೋಗಿ ಇಲಾಖೆಯವರು ಕಲೆತು ಮಾಡಬೇಕು. ಮುರ್ನಾಲ್ಕು ವರ್ಷಗಳಾದರೂ ಏನೂ ಮಾಡಿಲ್ಲ. ನಾನು ಕಳೆದ ಸಾರಿ ಪ್ರಶ್ನೆ ಕೇಳಿದ್ದೇನೆ, ಸರ್ಕಾರ ಸೂಕ್ತಕ್ರಮ ತೆಗೆದುಕೊಳ್ಳಲಾಗುತ್ತದೆಂದು ಹೇಳಿದ್ದರೂ ಏತಕ್ಕೋಸ್ಕರ ಅದರ ಬಗ್ಗೆ ಸೂಕ್ತಕ್ರಮ ತೆಗೆದುಕೊಂಡಿಲ್ಲ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಕಳುಹಿಸಿರುವ ನೋಟೀಸನ್ನು ನಾನು ಓದುತ್ತೇನೆ.—'ಬಳ್ಳಾರಿ ಜಿಲ್ಲಾ ಬಳ್ಳಾರಿ ತಾಲ್ಲೂಕು, ಯಲ್ಲಾಪುರ ಗ್ರಾಮವು ತುಂಗಭದ್ರಾ ನೀರಾವರಿ ಯೋಜನೆಯ ಆಚ್ಚುಕಟ್ಟು ಪ್ರದೇಶದಲ್ಲಿ ಇದ್ದು ಸದರಿ ಊರಿನಲ್ಲಿ ವಾಸಿಸುವ ಪ್ರದೇಶದಲ್ಲಿ ಸನಳು ಜಾಸ್ತಿಯಾಗಿ ಮನೆಯೊಳಭಾಗದಲ್ಲಿ ನೀರು ಹರಿಯುತ್ತದೆ. ಬಾವಿಗಳು ತುಂಬಿ ಹರಿಯುತ್ತವೆ. ಬಾವಿಯಲ್ಲಿ ಹುಳುಬಿದ್ದು ಅನಾರೋಗ್ಯದ ಕೇಂದ್ರವಾಗಿರುತ್ತದೆ. ಊರಿನ ಮಧ್ಯದ ರಸ್ತೆಗಳಲ್ಲಿ ನೀರು ಹರಿಯುತ್ತದೆ. ಇದರಿಂದ ತೊಂದರೆಯಾಗಿದೆ ಜನಜೀವನ ದುಸ್ಥಿತಿಯಲ್ಲಿದೆ ಕಾನೂನು ರೀತ್ಯ ಗ್ರಾಮವನ್ನು ಸ್ಥಳಾಂತರಿಸುವ ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಈ ಹಿಂದೆ ಹಲವು ಬಾರಿ ಕೇಳಿಕೊಂಡರೂ ಇದುವರೆಗೂ ಕ್ರಮ ಕೈಗೊಳ್ಳದಿರುವ ಬಗ್ಗೆ.—ಇದಕ್ಕೆಲ್ಲಾ ಯಾರು ಉತ್ತರ ನೀಡಬೇಕು ?

ಶ್ರೀ ಕೆ. ಶಿವಮೂರ್ತಿ.—ಸ್ಥಳಾಂತರಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಕೇಳಿಕೊಂಡರೂ ಕ್ರಮ ತೆಗೆದುಕೊಂಡಿಲ್ಲವೆಂದು ಸೂಚನೆಯಲ್ಲಿ ಹೇಳಿದ್ದಾರೆ.

(vii) ಯಗಚಿ ನದಿಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ಕೊಡಬೇಕಾದ ಪರಿಹಾರ ಧನ

ಶ್ರೀ ಜೆ. ಡಿ. ಸೋಮಪ್ಪ (ಸಕಲೇಶಪುರ(.—ಮಾನ್ಯ ಅಧ್ಯಕ್ಷರೇ, ದುರ್ವೈವದ ಸಂಗತಿ ಎಂದರೆ ನನ್ನ ಕ್ಷೇತ್ರದ ಆಲೂರು ತಾಲೂಕಿನ ದೊಡ್ಡ ಕಣಗಾಲು ಬಳಿ ಕಳೆದ 9ನೇ ತಾರೀಖು ಐದು ಮಂದಿ ಅವಿವಾಹಿತ ಯುವತಿಯವರು ಯಗಚಿ ಹೊಳೆಯನ್ನು ದಾಟುತ್ತಿದ್ದಾಗ ಅಕಾಲ ಪ್ರವಾಹದಿಂದಾಗಿ

ಕೊಚ್ಚಿಕೊಂಡು ಹೋಗಿದ್ದು ಅವರ ಮೃತ ದೇಹಗಳನ್ನು ಪೋಲೀಸಿನವರು ದಿನಾಂಕ 10 ಮತ್ತು 12 ರಂದು ಪತ್ತೆಹಚ್ಚಿ ಕೊಟ್ಟರು ಇದುವರೆಗೂ ಈ ಮೃತ ಅವಿವಾಹಿತ ಯುವತಿಯರ ಕುಟುಂಬದವರಿಗೆ ಯಾವ ಪರಿಹಾರವನ್ನೂ ಕೊಟ್ಟಿಲ್ಲ. ದಯಮಾಡಿ ಮುಖ್ಯಮಂತ್ರಿಗಳ ನಿಧಿಯಿಂದ ತಲಾ ಹತ್ತು ಸಾವಿರ ರೂಪಾಯಿ ಆದರೂ ಇವರ ಕುಟುಂಬದವರಿಗೆ ಪರಿಹಾರವಾಗಿ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).--ಮಾನ್ಯ ಸ್ನೇಹಿತರು ಹೇಳಿದ್ದು ನಿಜ ಇದೆ, ಕಾನೂನು ಪ್ರಕಾರ ಪರಿಶೀಲನೆ ಮಾಡಿ ಏನು ಕೊಡಲಿಕ್ಕೆ ಸಾಧ್ಯವೋ ಅದನ್ನು ಕೊಡಲಾಗುತ್ತದೆ.

ಶ್ರೀ ಜೆ. ಡಿ. ಸೋಮಪ್ಪ.--ಕಾನೂನು ಪರಿಶೀಲನೆ ಮಾಡುವುದು ಏನು ? ಅವರು ಸತ್ತೇ ಹೋಗಿದ್ದಾರೆ. ಏನಾದರೂ ಸಹಾಯ ಮಾಡುತ್ತೇವೆ ಎಂದು ನಿರ್ದಿಷ್ಟವಾಗಿ ಆಶ್ವಾಸನೆ ಕೊಡಿ. ಇದು ಪ್ರಾಣ ಹೋಗಿರತಕ್ಕಂಥ ವಿಚಾರ ಎಲ್ಲದಕ್ಕೂ ಒಂದೇ ಮಂತ್ರ ಹೇಳಿದರೆ ಹೇಗೆ ? ಇವತ್ತಿನವರೆಗೂ ಅವರ ಕುಟುಂಬ ವರ್ಗದವರಿಗೆ ಏನೂ ಪರಿಹಾರ ಕೊಟ್ಟಿಲ್ಲ.

ಶ್ರೀ ವಿ. ಎಲ್. ಪಾಟೀಲ್.—ಆಯಿತು, ಮಾಡುತ್ತೇವೆ.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ನಾನು ಕೂಡ ಮಾತನಾಡಬೇಕು.

ಅಧ್ಯಕ್ಷರು.—ಇದು ಮಾತನಾಡುವ ವಿಷಯ ಅಲ್ಲ. 334 ರಲ್ಲಿ ಯಾರು ಸೂಚನೆ ಕಳಿಸುತ್ತಾರೆ ಅವರಿಗೆ ಮಾತ್ರ ಅವಕಾಶ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ನಮಗೆ ಏನಾದರೂ ಉತ್ತರ ಕೊಡುತ್ತಾರೋ ಅಥವಾ ಇಲ್ಲವೋ ? ನಮಗೆ ನೀವು ರಕ್ಷಣೆ ಕೊಡಬೇಕು.

ಅಧ್ಯಕ್ಷರು.—ಮಧ್ಯೆ ಮಧ್ಯೆ ಹೀಗೆ ನೀವು ಮಾತನಾಡಬಾರದು. 334ರ ಕೆಳಗೆ ಸದನದ ಗಮನವನ್ನು ಸೆಳೆಯುವುದು. ಸರ್ಕಾರದ ಗಮನವನ್ನಲ್ಲ.

ಶ್ರೀ ಎಂ. ರಾಮಪ್ಪ.--ಇದರ ಬಗ್ಗೆ ನಾನು ಚುಕ್ಕೆ ಗುರುತಿನ ಪ್ರಶ್ನೆಯನ್ನೂ ಕೂಡ ಕಳಿಸಿದ್ದೇನೆ.

ಅಧ್ಯಕ್ಷರು.--ಉತ್ತರ ತರಿಸಿ ಕಳಿಸುತ್ತೇನೆಂಮ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರಲ್ಲ ?

ಶ್ರೀ ಎಂ. ರಾಮಪ್ಪ.--ಏನು ಮಾಡುತ್ತಾರೆ ಎಂಬುದರ ಬಗ್ಗೆ ಅವರು ಹೇಳಿಲ್ಲ.

ಶ್ರೀ ಎನ್.ಜಿ. ನಾಯಕ್,--ಸ್ವಾಮಿ, ನನಗೂ ಮಾತನಾಡಲಿಕ್ಕೆ ಅವಕಾಶ ಕೊಡಿ. ಸತ್ತಿರುವರೆಲ್ಲರೂ ಹರಿಜನರ ಮಕ್ಕಳು ಇದ್ದಾರೆ. 9ನೇ ತಾರೀಖು ಎಂಟು ಗಂಟೆ ಸಮಯದಲ್ಲಿ ಅಕಸ್ಮಾತ್ತಾಗಿ ನೀರಿನಲ್ಲಿ ಹೊಡೆದುಕೊಂಡು ಹೋಗಿದ್ದಾರೆ. ಮಳೆಗಾಲವಾಗಿದ್ದರಿ ನೀರಿನಲ್ಲಿ ಹೊಡೆದುಕೊಂಡು ಹೋಗಿದ್ದಾರೆ ಎಂದು ಹೇಳಬಹುದಾಗಿತ್ತು. ಆದರೆ ಇಲ್ಲಿ ಅಕಸ್ಮಾತ್ ಹೊಡೆದುಕೊಂಡು ಹೋಗಿರುವುದು. 10ನೇ ತಾರಿಖೀಗೆ ಪೋಲೀಸರು ಅವರ ದೇಹಗಳನ್ನು ಕಂಡುಹಿಡಿದಿದ್ದಾರೆ. ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗ ನಮ್ಮ ಸರ್ಕಾರದವರು ಕುಣಿಯತಕ್ಕಂಥ ನಾಟಕದವರಿಗೆ ಬಹುಮಾನ ಕೊಡುತ್ತಾರೆ. ಇಂತಹವರಿಗೆ ಏನೂ ಸಹಾಯ ಕೊಡುವುದಿಲ್ಲ.

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇನೆಂದು ಮಂತ್ರಿಗಳು ಹೇಳಿದ್ದಾರೆ.

(viii) ವಸಂತನಗರದಲ್ಲಿ ಹಾನಿಗೊಳಗಾದ ಗುಡಿಸಲು ನಿವಾಸಿಗಳಿಗೆ ಕೊಡತಕ್ಕಂತ ಪರಿಹಾರದ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಸಂತನಗರದಲ್ಲಿ ಫೈವ್ ಸ್ಟಾರ್ ಹೋಟೆಲ್ ನಿರ್ಮಾಣ ಮಾಡುತ್ತಿದ್ದಾರೆ. ಅದರ ಪಕ್ಕದಲ್ಲಿ ಇರತಕ್ಕಂಥ ಅರವತ್ತು ಗುಡಿಸಲುಗಳು ಸುಟ್ಟು ಸುಮಾರು ಒಂದೂವರೆ ಲಕ್ಷ ರೂಪಾಯಿ ಹಾನಿಯಾಗಿದೆ. ಅಲ್ಲಿದ್ದವರು ಸುಮಾರು ಗುಲ್ಬರ್ಗಾ, ರಾಯಚೂರು, ಬೀದರ್ ಪ್ರದೇಶಗಳಿಂದ ಬಂದಂತಹ ಕೂಲಿಕಾರರು. ಇಲ್ಲಿಯವರೆಗೂ ಅವರಿಗೆ ಯಾವ ಪರಿಹಾರವನ್ನೂ ಕೊಟ್ಟಿಲ್ಲ. ಮಾಲೀಕರು ಕೂಡ ಅವರನ್ನು ಭೇಟಿಯಾಗಿ ಯಾರು ಇದರಲ್ಲಿ ಗಾಯಗೊಂಡಿದ್ದಾರೆ, ಅವರನ್ನು ಆಸ್ಪತ್ರೆಗೆ ದಾಖಲು ಮಾಡುವುದೇ ಆಗಲಿ, ಔಷಧಿ ಕೊಡುವ ವ್ಯವಸ್ಥೆಯಾಗಲೀ ಮಾಡಿಲ್ಲ. 16-3-1984 ರಂದು ಈ ಘಟನೆ ನಡೆದಿದೆ. ಎಲ್ಲಾ ಪತ್ರಿಕೆಗಳಲ್ಲೂ ಇದರ ಬಗ್ಗೆ ವರದಿಯಾಗಿದೆ. ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ. ಆದರೆ ಇಲ್ಲಿಯವರೆಗೂ